


## ‘ತಿರುಳಿಲ್ಲದ ಮಾತು’ಗಾರರಿವರು

ಕನ್ನಡ ವಾಹಿನಿಗಳಲ್ಲಿ ವಿವಿಧ ಸಂದರ್ಶನಗಳನ್ನು ತೆಗೆದುಕೊಳ್ಳುವವರು ಹಾಗೂ ಚರ್ಚೆಗಳನ್ನು ನಡೆಸಿಕೊಡುವವರು ತಿರುಳಿಲ್ಲದ ಮಾತುಗಾರರಂತೆ ಕಂಡುಬರುತ್ತಾರೆ. ಸಾಮಾಜಿಕ, ಸಾಹಿತ್ಯಿಕ, ಆಧ್ಯಾತ್ಮಿಕ, ಆರೋಗ್ಯಸಂಬಂಧಿ, ಸಂಗೀತಸಂಬಂಧಿ ವಿಷಯಗಳ ಬಗ್ಗೆ ವಿದ್ವಾಂಸರ ಸಂದರ್ಶನ ತೆಗೆದುಕೊಳ್ಳುವಾಗ ಈ ಮಾತುಗಾರರು ಕಂಠಪಾಠದ ವಾಕ್ಯಗಳನ್ನು ಒಪ್ಪಿಸುವಲ್ಲೇ ಸುಸ್ತಾಗುತ್ತಾರೆ. ’ಹೊಸ ರುಚಿ’, ’ಹಳೆ ತಿಂಡಿ’ಯಂಥ ಕಾರ್ಯಕ್ರಮಗಳಲ್ಲಿವರು ನಿರರ್ಥಕ ಉದ್ಗಾರಗಳಲ್ಲೇ ಕಾಲ ಕಳೆಯುತ್ತಾರೆ.

ಭಾಗವಹಿಸಿದ ರಾಜಕಾರಣಿಗಳ ಅಥವಾ ರಾಜಕೀಯ ವಿಶ್ಲೇಷಕರ ಮಾತುಗಳನ್ನು ಅರ್ಧಕ್ಕೇ ತಡೆಯುವುದು, ಮಧ್ಯೆಮಧ್ಯೆ ಅರ್ಥಶೂನ್ಯ ಅಥವಾ ಅಧಿಕಪ್ರಸಂಗಿ ಪ್ರಶ್ನೆಗಳನ್ನು ಕೇಳುವುದು, ವಿಷಯಾಂತರ ಮಾಡುವುದು, ವಿಷಯ ಗೊತ್ತಿಲ್ಲದಿದ್ದರೂ ಮಹಾ ಗೊತ್ತಿದ್ದವರಂತೆ ನಟಿಸುವುದು– ಇಷ್ಟೇ ಈ ತಿರುಳಿಲ್ಲದ ಮಾತುಗಾರರ ಬಂಡವಾಳ. ‘ಸುವರ್ಣ’ ಸುದ್ದಿ ವಾಹಿನಿಯ ರಂಗನಾಥ್‌ರಂಥ ಬೆರಳೆಣಿಕೆಯಷ್ಟು ಮಂದಿಯನ್ನು ಹೊರತುಪಡಿಸಿದರೆ ಉಳಿದವರದೆಲ್ಲ ಬಂಡವಾಳವಿಲ್ಲದ ಬಡಾಯಿ!

ಅಬ್ಬರದ ಉಡುಗೆ ತೊಟ್ಟು, ಗೊಬ್ಬರದಂಥ ಮೇಕಪ್ ಮೆತ್ತಿಕೊಂಡು ಕ್ಯಾಮೆರಾದೆದುರು ಕೂತು ಕ್ಷಣಕ್ಷಣಕ್ಕೂ ಕೃತಕ ನಗು ಹೊರಹಾಕುತ್ತ, ಅವಿವೇಕವೋ, ಅರ್ಥಹೀನವೋ, ಅಧಿಕಪ್ರಸಂಗವೋ– ಒಟ್ಟು ಬಾಯಿಗೆ ಬಂದದ್ದನ್ನೆಲ್ಲ ಒದರುತ್ತ ಅರ್ಧ ಗಂಟೆ ಕಳೆದುಬಿಟ್ಟಾಕ್ಷಣ ಸಂದರ್ಶನ/ ಚರ್ಚೆ ಸಾರ್ಥಕವಾಗುವುದಿಲ್ಲ, ಅದು ಸಾರ್ಥಕವಾಗ ಬೇಕಾದರೆ ಅದನ್ನು ಪ್ರಸ್ತುತಪಡಿಸುವ ’ಪ್ರಭೃತಿ’ಗಳ ಮಿದುಳುಗಳಲ್ಲಿ ತಿರುಳು ಇರಬೇಕಾಗುತ್ತದೆ.

–ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

## ಏನೋ ಒಂಥರಾ ಮಜಾ! ಅಷ್ಟೆ

ಸುವರ್ಣ ವಾಹಿನಿಯ ‘ಪ್ಯಾಟೆ ಹುಡುಗೀರ ಹಳ್ಳಿ ಲೈಫ್’ ಧಾರಾವಾಹಿಯಲ್ಲಿ ಭಾಗವಹಿಸಿರುವ ಹುಡುಗಿಯರು ಪ್ಯಾಟೆಯ ಸಮಗ್ರ ಪ್ರಾತಿನಿಧಿಕ ಸ್ವರೂಪ ಅಲ್ಲ. ಇವರು ‘ಎಲೈಟ್’ ಹುಡುಗಿಯರು. ಭಾರೀ ಶುಲ್ಕ ತೆತ್ತು ಇಂಗ್ಲಿಷ್ ಮಾಧ್ಯಮದ ಶಾಲೆ, ಕಾಲೇಜುಗಳಲ್ಲಿ ಓದಿ ‘ಕಂಗ್ಲಿಷ್’ ಮಾತನಾಡುವ ಇಂತಹ ಪ್ರತಿಷ್ಠಿತ ವರ್ಗದ (ಎಲೈಟ್) ಹುಡುಗಿಯರ ಸಂಖ್ಯೆ ನಗರಗಳಲ್ಲಿ ಶೇ.10 ಇದ್ದರೆ ಹೆಚ್ಚು. ಉಳಿದ 90 ಭಾಗದಲ್ಲಿ ಕಾನ್ವೆಂಟ್‌ನಲ್ಲಿ ಓದಿದ್ದರೂ ಸ್ವಚ್ಛ ಕನ್ನಡ ಮಾತನಾಡುವ ಶೇ.40ರಷ್ಟು ಇದ್ದಾರೆ. ಉಳಿದ ಶೇ.50 ಹುಡುಗಿಯರು ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಓದಿದ ಕೆಳ ಮಧ್ಯಮ ಹಾಗೂ ಮಧ್ಯಮ ವರ್ಗದವರು.

ಆದರೆ ಏನೋ ಒಂಥರಾ ಮಜಾ ಇದೆ, ಅಷ್ಟೆ!

–ಜಿ.ಎನ್.ನಿಶಾಂತ, ಬೆಂಗಳೂರು

## ಗ್ರಾಮೀಣರಿಗೆ ಅವಕಾಶ ಸಿಗಲಿ

‘ಚಂದನ’ದ ‘ಥಟ್ ಅಂತ ಹೇಳಿ’ ಕಾರ್ಯಕ್ರಮ ಉಪಯುಕ್ತವೇನೋ ಹೌದು! ಆದರೆ ಅದರಲ್ಲಿ ಗ್ರಾಮೀಣ ಭಾಗದವರಿಗೆ ಹೆಚ್ಚು–ಹೆಚ್ಚು ಅವಕಾಶಗಳು ಸಿಗುವಂತಾಗಬೇಕು. ಮಕ್ಕಳು ಮತ್ತು ವಿದ್ಯಾರ್ಥಿಗಳಿಗೇ ಇದು ಹೆಚ್ಚು ಪ್ರಯೋಜನಕಾರಿ. ಆದ್ದರಿಂದ ರಾತ್ರಿ 10.30ಕ್ಕೂ ಮುನ್ನ ಇಡುವುದು ಸೂಕ್ತ. ಅಷ್ಟೊತ್ತಿಗೆ ಮಕ್ಕಳು ನಿದ್ದೆ ಹೋಗುತ್ತಾರೆ.

–ಎಚ್.ಎಂ. ಕಾಳಮ್ಮ, ಬಸರಕೋಡು

ಪ್ರತಿಕ್ರಿಯೆ

## ಥಟ್ ಪುಸ್ತಕ ಹಂಚುವಿಕೆಯಲ್ಲ

ಮೂರನೆಯವರಾಗಿ ಉತ್ತರ ಹೇಳಿದವರಿಗೆ ಬಹುಮಾನ ಯಾಕೆ ಕೊಡುತ್ತಿಲ್ಲ ಎಂದು ಮಹಾರಾಷ್ಟ್ರ ವಾಸಿ ಟಿ.ಎಲ್.ರಾಮಚಂದ್ರನ್ ಎಂಬುವರು ಪ್ರಶ್ನಿಸಿದ್ದಾರೆ. ಹಾಗೆ ಭಾಗವಹಿಸಿದ ಎಲ್ಲರಿಗೂ ಬಹುಮಾನ ಕೊಟ್ಟರೆ ಅದು ಸ್ಪರ್ಧೆ ಆಗುವುದಿಲ್ಲ, ಪುಸ್ತಕ ಹಂಚುವಿಕೆ ಆಗುತ್ತದೆ.

–ನಾ.ಸೋಮೇಶ್ವರ, ಬೆಂಗಳೂರು

(ನಾ ಸೋಮೇಶ್ವರರ ಸಂದರ್ಶನ ಮುಂದಿನ ಪುಟದಲ್ಲಿದೆ)

## ದಿಢೀರ್ ಮುಕ್ತಾಯ

569ಕ್ಕೆ ಮುಕ್ತಾಯ ಗೊಳಿಸಿದ ಈ ಟಿವಿಯ ಬೃಂದಾವನ ಧಾರಾವಾಹಿಯ ಕೊನೆ ಕಂತು ಮಾತ್ರ ಪಾಠ ಓದಿದಂತ್ತಿತ್ತು. ಇಷ್ಟು ದಿನ ರಬ್ಬರ್‌ನಂತೆ ಎಳೆದು ಮುಕ್ತಾಯ ಮಾತ್ರ ದಿಢೀರ್ ಎಂದು ಮುಗಿದದ್ದು ನಿರಾಸೆಯನ್ನುಂಟು ಮಾಡಿದೆ. ಒಟ್ಟಿನಲ್ಲಿ ಸುಖಾಂತ್ಯದಲ್ಲಿ ಮುಕ್ತಾಯವಾದದ್ದು ಸಮಾಧಾನ.

–ಡಿ.ಎಸ್. ಪಂಕಜ ಸುಬ್ರಮಣ್ಯಂ, ಬೆಂಗಳೂರು

## ಇದು ಸ್ವಯಂವರವಲ್ಲ!

ಪ್ರಾಚೀನ ಕಾಲದಲ್ಲಿ ನಡೆಯುತ್ತಿದ್ದ ಸ್ವಯಂವರದಲ್ಲಿ ರಾಜಕುಮಾರಿಯು ಸಭೆಗೆ ಬಂದಿದ್ದ ರಾಜಕುಮಾರರುಗಳಲ್ಲಿ ಯಾರನ್ನಾದರೂ ಇಷ್ಟಪಟ್ಟು ಮಾಲೆ ಹಾಕಿದರೆ ಆ ಮದುವೆ ಪಕ್ಕಾ ಆಗುತ್ತಿತ್ತು. ಆದರೆ ಇದು ಹೆಸರಿಗೆ ಮಾತ್ರ ಸ್ವಯಂವರವಾಗಿದೆ, ಪರಸ್ಪರರ ನಿರಾಕರಣೆಯೇ ಹೆಚ್ಚಾಗಿದೆ.

‘ದೊಡ್ಡವರ ಜೊತೆ ಚರ್ಚೆ ಮಾಡಬೇಕು, ಯೋಚನೆ ಮಾಡಲು ಸ್ವಲ್ಪ ಸಮಯಬೇಕು, ನಮ್ಮ ಸಂಸ್ಕೃತಿಗೆ ಇವಳು ಹೊಂದಿಕೊಳ್ಳುವುದು ಕಷ್ಟ, ನನಗಿಂತಲೂ ಅವಳು ಹೆಚ್ಚು ಕಲಿತಿದ್ದಾಳೆ’ ಎಂದು ನಿರಾಕರಿಸುವ ವರಮಹಾಶಯರೇ ಜಾಸ್ತಿ, ಅದೂ ಕನ್ಯೆ ಒಬ್ಬನನ್ನು ಆಯ್ಕೆಮಾಡಿಕೊಂಡ ಮೇಲೆ! ಇದನ್ನೆಲ್ಲ ಮೊದಲೇ ನೋಡಿಕೊಂಡಿರುವುದಿಲ್ಲವೇ?

ನಾಲ್ಕನೇ ದಿನ ನ್ಯೂಮರಾಲಜಿಸ್ಟ್ ಕರೆಸಿ ಅವರಿಂದ ಹುಡುಗರ ಸಂಖ್ಯೆಗಳನ್ನು ಹುಡುಗಿಯೊಂದಿಗೆ ತಾಳೆ ಮಾಡುವುದೂ ಸೂಕ್ತವಲ್ಲ, ಜಾತಕದ ಜೊತೆ ಜೊತೆಗೆ ಈ ಕೆಲಸವೂ ಮೊದಲನೆ ದಿನವೇ ನಡೆಯಬಹುದಲ್ಲ?

–ಪುಷ್ಪಾ, ಎನ್.ಕೆ. ರಾವ್, ಉಡುಪಿ

## ಪ್ರಬುದ್ಧತೆ ಕೊರತೆ

ತಮ್ಮ ಬಾಳಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳಲು ಸ್ವಯಂವರ ಒಳ್ಳೆಯ ವೇದಿಕೆಯನ್ನೇನೋ ನಿರ್ಮಿಸಿದೆ. ಆದರೆ ಪಾಲ್ಗೊಳ್ಳುವವರು ಕೇವಲ ಆಡಂಬರದ ಜೀವನಕ್ಕೆ ಹೆಚ್ಚಿನ ಒತ್ತು ನೀಡುತ್ತಿದ್ದಾರೆ. ಇದಕ್ಕೆ ನಿರೂಪಕಿ ರಕ್ಷಿತಾರ ಕಾಣಿಕೆಯೂ ಅಪಾರ. ಗಂಡು– ಹೆಣ್ಣು ಒಬ್ಬರನ್ನೊಬ್ಬರು ಅರಿತು ಮಾತ್ರ ಬಾಳಿದರೆ ಸಾಲದು. ಮನೆಯಲ್ಲಿರುವಂತಹ ಹಿರಿಯರ ನಡವಳಿಕೆ, ಸ್ವಭಾವವನ್ನು ಅರಿಯಲು ಹಾಗೂ ಅದಕ್ಕೆ ತಕ್ಕಂತೆ ನಡೆದುಕೊಂಡು ಹೋಗುವ ಬಗ್ಗೆ ಹೆಚ್ಚಿನ ಚರ್ಚೆ ಮಾಡಬೇಕು. ಆದರೆ ಮುಂಚೆ ‘ಯಾರನ್ನಾದರೂ ಲವ್ ಮಾಡಿದ್ದೀಯಾ’, ‘ಖರ್ಚು ಜಾಸ್ತಿ ಮಾಡುತ್ತೀಯಾ’ ಅಥವಾ ‘ತುಂಬಾ ಜಿಪುಣ ಬುದ್ಧೀನಾ’ –ಈ ರೀತಿಯ ಪ್ರಶ್ನೆಗಳನ್ನು ಕೇಳುವುದು ನೋಡಿದರೆ ಮದುವೆಯ ವಯಸ್ಸಿಗೆ ಇರಬೇಕಾದಂತಹ ಪ್ರಬುದ್ಧತೆ ಇಲ್ಲದಿರುವುದು ಕಂಡುಬರುತ್ತದೆ.

–ಎನ್. ಪ್ರಶಾಂತ್, ಮೈಸೂರು

## ಹುಡುಗಿಯರ ಶೋಷಣೆ

‘ಪ್ಯಾಟೆ ಹುಡ್ಗೀರ್ ಹಳ್ಳಿ ಲೈಫು’ ಹೆಣ್ಣುಮಕ್ಕಳ ಶೋಷಣೆ ಮಾಡುವಂತಿದೆ. ಪುರದಾಳು ಗ್ರಾಮದ ಹಳ್ಳಿ ವೈಭವ ಕಣ್ಣು ಮನ ತುಂಬುತ್ತಿದೆ. ಮುಗ್ದ ಜನರ ಮಾತು, ಉಪಚಾರ ಅಭಿನಂದನೀಯ.

ನಿರೂಪಕ ಅಕುಲ್ ಬಾಲಾಜಿಯವರ ಬಾಡಿ ಲ್ಯಾಂಗ್ವೇಜ್ ಇಷ್ಟವಾಗುವುದಿಲ್ಲ. ಅಡಿಗಡಿಗೆ ಅವರು ಹೇಳುವ– ‘ಗರ್ಲ್ಸ್, ಐಶು–ನೈಸು, ರ್‍ಯಾಂಬೋ, ಸೈಲೆಂಟ್ ಕಿಲ್ಲರ್’– ಇತ್ಯಾದಿಗಳಿಗೆ ಕಡಿವಾಣ ಹಾಕಬೇಕು. ಪ್ಯಾಟೆ ಹುಡ್ಗೀರ ಉಡುಗೆ ತೊಡುಗೆ ನಮ್ಮ ಸಂಸ್ಕೃತಿಗೆ ಭೂಷಣವಲ್ಲ.

–ನಾರಾಯಣ ರೈ, ಕುಕ್ಕುವಳ್ಳಿ, ಪುತ್ತೂರು

## ಕೊಡಗಿನ ಚೆಲುವೆಯ ಅಂತರಂಗ

ಕೊಡಗಿನ ಚೆಲುವೆ ಶ್ವೇತಾ ಚೆಂಗಪ್ಪ ಇಂದು ಟಿವಿ ಧಾರಾವಾಹಿಯಲ್ಲಿ ಹೆಸರಾಂತ ಹೀರೋಯಿನ್. ಅವರ ಕುರಿತ ಮಾಹಿತಿ ಜತೆಗೆ ಟಿವಿ ಕ್ಷೇತ್ರದ ಹಲವು ಸಂಗತಿಗಳನ್ನು ಪ್ರತಿಸ್ಪಂದನದ ನಾಗು ಸಂದರ್ಶನ ತಿಳಿಸಿಕೊಟ್ಟಿದೆ.

ಎಚ್.ಎನ್.ವಿಶ್ವನಾಥ್, ಶಿವಮೊಗ್ಗ/ ಬಿ.ವಿ.ಪೂಣಚ್ಚ, ಮಡಿಕೇರಿ/
ಬಸವರಾಜ ಬಿರಾದಾರ, ಬೀದರ